ಆಯಾಮವನ್ನು ಕೊಟ್ಟಿದೆ. ಈ ಪದ್ಯವಿರುವುದು ಬೆಳದಿಂಗಳು ಎನ್ನುವ ಮಾಯೆಯ ಬಗ್ಗೆ. ಈ ಪದ್ಯವನ್ನು ಓದುವುದೆಂದರೆ ಒಂದು ಮಾಂತ್ರಿಕವಾದ ಜಗತ್ತನ್ನು ಪ್ರವೇಶ ಮಾಡಿದ ಹಾಗೆ. ಪಠ್ಯವೇ ಹೇಳುವ ಹಾಗೆ 'ಮಂತ್ರಿಸಿದ ಬೂದಿ ಮೆಚ್ಚು ಮಾಟದಿಂದಾಗಿ'

ನೆಲದವರು ನಿದ್ದಿಯ ಪಾಲು,
ಮೂರು ಮುಕ್ಕಾಲು
ಮೂರೂ ಮುಕ್ಕಾಲು
ಅರ ಹುಚ್ಚು ಎಚ್ಚತ್ತರು ಕೂಡ

ಆಗಸದಲ್ಲಿ ನೆರೆದವರು ಮಂತ್ರದ ಬೂದಿ ಹರಡಿದ್ದರಿಂದ ನೆಲದ ಮೇಲಿನ ಮನುಷ್ಯರು ಎಚ್ಚರವಾಗಿದ್ದರೂ ಅರೆಹುಚ್ಚಿನ ಸ್ಥಿತಿಯಲ್ಲಿದ್ದಾರೆ. ಬೆಳದಿಂಗಳು ಮಂತ್ರದ ಬೂದಿಯಂತೆ ಈ ಮಾಯೆಯ ಲೋಕವನ್ನು ಸೃಷ್ಟಿಸಿದೆ. ಇಲ್ಲಿ ವಾಸ್ತವ ಲೋಕವು ಮಾಯಾಲೋಕವಾಗಿ ಬದಲಾಗಿದೆ. ಆದ್ದರಿಂದಲೇ ಇದು ಮಾಯಕಾರರ ಬೀಡು ಎಂದು ಪದ್ಯವು ಹೇಳುತ್ತದೆ. ಇದು ಬಾಳನ್ನು ಮರೆಸುತ್ತದೆ, ತಣ್ಣಗಿರಿಸುತ್ತದೆ. ಅಂದರೆ ಇಂಥ ಮಾಯಾಲೋಕದಲ್ಲಿ ಕಳೆದುಹೋಗಿರುವ ಪ್ರಜ್ಞೆಗೆ ಬಾಳಿನ, ವಾಸ್ತವ ಪ್ರಪಂಚದ ಬೇಗುದಿಗಳ ಎಚ್ಚರವಿದೆ. ಇದು ಮಾಯಾಲೋಕವೇ, ಆದರೆ ಬೆಳದಿಂಗಳು ಕತ್ತಲಿದ್ದಾಗ ಮಾತ್ರ ಕಾಣಿಸಿಕೊಳ್ಳುತ್ತದೆ. ಬೆಳಕಿನಲ್ಲಿ ಅಲ್ಲ, ಅಲ್ಲದೆ ಅದು ಇರುವಷ್ಟು ಹೊತ್ತು ತನ್ನ ಮಾಂತ್ರಿಕತೆಯಿಂದ ನಮ್ಮನ್ನು ತಣ್ಣಗಿರಿಸಬಲ್ಲದು. ಯಾವುದು ಈ ಬೆಳದಿಂಗಳು, ಯಾವುದಿದರ ಧಾಟಿ ಎಂದು ಹುಡುಕುತ್ತಾ ಹೋದಾಗ ದೊರೆಯುವ ಉತ್ತರವೆಂದರೆ ಅದು ಅಂಬಿಕಾತನಯನ ಹಾಡೇ ಎಂದು. ಅಂದರೆ ಬೇಂದ್ರೆ ಕಾವ್ಯದಲ್ಲಿ ಸೃಜನಶೀಲತೆ, ಕಾವ್ಯ, ಕಾಮ, ಕುಣಿತ ಇವುಗಳು ವಾಸ್ತವವನ್ನು ಮೀರುವ ಸಾಧನಗಳಾಗಿವೆ. ಮೀರಬೇಕಾದುದು ಅವಶ್ಯಕವೇಕೆಂದರೆ ವಾಸ್ತವ ಲೋಕವು ಬಿರುಕುಗಳಿಂದ ಕೂಡಿದೆ. ಸಂಸಾರವೆಂಬ ಸಾಗರದಲ್ಲಿ ಮುಗಿಯದ ಸಾವಿರಾರು 'ಬಂಡಿಗಳು' (ಬಂಡೆಗಳು) ಇವೆ. ನೀವು ಅದೆಷ್ಟು ಹಿಗ್ಗಿನಿಂದ ಭರವಸೆಯಿಂದ ಹುಟ್ಟು ಹಾಕಿದರೂ ಯಾವ ಬಂಡೆ ನಾವೆಯನ್ನು ಅಥವಾ ಪುಟ್ಟ ಹರಗೋಲಿಗೆ ಅಪ್ಪಳಿಸುತ್ತದೆ ಎಂದು ಹೇಳಲಾಗದು. ('ನೀ ಹಿಂಗ ನೋಡ ಬ್ಯಾಡ ನನ್ನ' ಪದ್ಯದ ಸಾಲುಗಳ ಬಗ್ಗೆ ಈ ಮಾತುಗಳನ್ನು ಹೇಳುತ್ತಿದ್ದೇನೆ).

ಅನೇಕ ವಿಮರ್ಶಕರ ಪ್ರಕಾರ ಬಿರುಕುಗಳಿರುವ ವಾಸ್ತವ ಮತ್ತು ಅವುಗಳನ್ನು ಕ್ಷಣಿಕವಾಗಿಯಾದರೂ ಮೀರುವ ಸಾಧ್ಯತೆ ಇವುಗಳ ಬಗ್ಗೆ ಬೇಂದ್ರೆಯವರ ಕಾವ್ಯದ ಹಿಂದೆ ಇರುವ ಶ್ರದ್ಧೆಯೆಂದರೆ ಅಂತಿಮವಾಗಿ ಬದುಕು ಶ್ರೇಯಸ್ಕರವಾಗಿದೆ ಎನ್ನುವುದು. ಅಂದರೆ ಎದುರಿಗೇ ಕಾಣುವ ವಿರೋಧಾಭಾಸಗಳು, ನೋವು–ಬೇಗುದಿಗಳು, ಇವೆಲ್ಲವುಗಳ ಜೊತೆಗೆ ಬದುಕಿಗೆ ಒಂದು teleology ಇದೆ. ಇದು ಒಂದು ಬಗೆಯ ತಾತ್ವಿಕವಾದ ನಂಬಿಕೆ. ಅದರ ಅರ್ಥವೆಂದರೆ, ನಮಗೆ ಆ ಕ್ಷಣಕ್ಕೆ ಅರ್ಥವಾಗದಿದ್ದರೂ ಒಟ್ಟಾರೆ ಬದುಕು ಒಂದು ಉದ್ದೇಶದ ಈಡೇರುವಿಕೆಯ ಕಡೆಗೆ ಚಲಿಸುತ್ತದೆ. ಈ ಕ್ರಿಯೆಯೂ ಒಂದು ಸಾಧ್ಯತೆಯಾಗಿ ಬದುಕಿನ ಒಡಲೊಳಗೇ ಇರುತ್ತದೆ. ಈ ಶ್ರದ್ಧೆಯಿರುವುದರಿಂದಾಗಿ ಬೇಂದ್ರೆ ಕಾವ್ಯದ ಪ್ರಧಾನ ಪ್ರತಿಮೆಯು ಬೆಳೆಯುವುದು ಆಗಿದೆ. ಬೀಜ, ಮೊಳಕೆ, ಹೂವು ಇವೆಲ್ಲ ಸಂಕೇತಿಸುವ 'ಆಗುವ' ಕ್ರಿಯೆ ಅವರಿಗೆ ಮುಖ್ಯವಾಗಿದೆ.

ಇದು ಕೇವಲ ನಿಸರ್ಗದ ಲೋಕಕ್ಕೆ ಅನ್ವಯಿಸುವುದಿಲ್ಲ. ಮನುಷ್ಯ ಪ್ರಪಂಚವೂ 'ಆಗುತ್ತಲೇ' ಇರುತ್ತದೆ. ಮನುಷ್ಯ ಸಂಬಂಧಗಳು ಆಗುತ್ತಲೇ ಇರುತ್ತವೆ. ಎಲ್ಲಾ ಏಳುಬೀಳುಗಳು ಒಂದು ಉದ್ದೇಶಿತವಾದ ಆದರೆ ನಮ್ಮ ತಿಳಿವಳಿಕೆಗೆ ಪೂರ್ತಿಯಾಗಿ ಸಿಕ್ಕದ ನೆಲೆಯೊಂದರ ಕಡೆಗೆ ಚಲಿಸುತ್ತಲಿರುತ್ತವೆ. ಬೇಂದ್ರೆ ಕಾವ್ಯದ ಗುಣವೆಂದರೆ, ಅದು ಏಕಕಾಲಕ್ಕೆ ಸದ್ಯದ ಅಸಮಗ್ರತೆಯನ್ನೂ, ದೊಡ್ಡ ಭಿತ್ತಿಯಲ್ಲಿ ಇಟ್ಟು ನೋಡಿದರೆ ಇದೆಲ್ಲ ತಲುಪುವ ಸಾಫಲ್ಯ ಹಾಗೂ ಅರ್ಥವಂತಿಕೆಯ ಸ್ಥಿತಿಗಳನ್ನು ತಲುಪಬಲ್ಲ ಸ್ಥಿತಿಯನ್ನೂ ಗ್ರಹಿಸುತ್ತದೆ. ಇದು ಕಾವ್ಯದ ದೃಷ್ಟಿಯಿಂದ ಮುಖ್ಯವಾಗಿದೆ. ಕಾವ್ಯವು ಈ ಲೋಕದ ವಾಸ್ತವ ಪ್ರಪಂಚದ ಭಾಗವೇ ಆಗಿರುವುದರಿಂದ ಕೇವಲ ಅಂತಿಮ ಚರಮಸ್ಥಿತಿಯ ಬಗೆಗಿನ ಕಾವ್ಯ ನಮಗೆ ರುಚಿಸುವುದಿಲ್ಲ. ಅದು ಧರ್ಮ, ಅಧ್ಯಾತ್ಮವಾಗಿರುತ್ತದೆ. ಕಾವ್ಯವಾಗಿರುವುದಿಲ್ಲ. ನನ್ನ ವೈಯಕ್ತಿಕ ದೃಷ್ಟಿಯಲ್ಲಿ ಅಧ್ಯಾತ್ಮವು ಕಾವ್ಯಕ್ಕಿಂತ ಕೆಳದರ್ಜೆಯ ಸ್ಥಿತಿಯಾಗಿದೆ. ಹೀಗಾಗಿ ಕಾವ್ಯವನ್ನು